# MODEL EXAMINATION – FEBRUARY 2012

## PART II - KANNADA

HSE – I | Score: 80
Time : 2 ½ Hrs

*ಸೂಚನೆಗಳು:-*

- *ಪ್ರಶ್ನೆಗಳನ್ನು ಚೆನ್ನಾಗಿ ಓದಿ ಅರ್ಥೈಸಿದ ಬಳಿಕ ಉತ್ತರಿಸಿರಿ.*
- *ಮೊದಲ 15 ನಿಮಿಷಗಳು Cool off time ಆಗಿರುತ್ತದೆ. ಈ ಸಮಯದಲ್ಲಿ ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳತಕ್ಕದ್ದು*

1. 'ರಸ್ತೆ ಸುರಕ್ಷಾ ವಾರ'ದಂಗವಾಗಿ ಶಾಲಾ ಪರಿಸರದಿಂದ ರ್‍ಯಾಲಿಯೊಂದು ಆರಂಭವಾಗಲಿದೆ. ಇದಕ್ಕಾಗಿ ಎರಡು ಘೋಷಣಾ ವಾಕ್ಯಗಳನ್ನು ಬರೆಯಿರಿ. **2 ಅಂಕ**
2. 'ತಪಶ್ಚರಣ ನಿಶ್ಚಯಮನನಾದಂ' ಕಾವ್ಯ ಭಾಗದಲ್ಲಿ ಬಾಹುಬಲಿಯು ತಾನು ಗೆದ್ದ ರಾಜ್ಯವನ್ನು ಅಣ್ಣನಿಗೆ ಕೊಟ್ಟು ತಪಸ್ಸಿಗೆ ಹೋಗಲು ನಿರ್ಧರಿಸಿದನು. ಬಾಹುಬಲಿಯ ಈ ಮನಸ್ಥಿತಿಯ ಕುರಿತು ನಿಮ್ಮ ಅಭಿಪ್ರಾಯಗಳನ್ನು ತಿಳಿಸಿರಿ. **5 ಅಂಕ**
3. ಕೆಳಗೆ ಕೊಡಲಾದ ತಖ್ತೆಯ ಮಾಹಿತಿಯ ಆಧಾರದಿಂದ ಕವಿಯೊಬ್ಬರ ಪರಿಚಯ ಲೇಖನವನ್ನು ತಯಾರಿಸಿರಿ. **4 ಅಂಕ**
   - ಕವಿಯ ಹೆಸರು – ಮಂಜೇಶ್ವರ ಗೋವಿಂದ ಪೈ
   - ಜನನ – 23-3-1883
   - ಮಂಗಳೂರು, ಮದರಾಸುಗಳಲ್ಲಿ ವಿದ್ಯಾಭ್ಯಾಸ
   - ಅನೇಕ ಭಾಷೆಗಳಲ್ಲಿ ಪರಿಣತ
   - ನಾಟಕ, ಕವನ ಸಂಕಲನ, ಖಂಡ ಕಾವ್ಯ, ಸಂಶೋಧನಾ ಕ್ಷೇತ್ರಗಳ್ಲಿ ಪ್ರಸಿದ್ಧರು.
   - 34ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು
   - ಸ್ವಾತಂತ್ರ್ಯ ಹೋರಾಟಗಾರರು
   - ಕನ್ನಡದ ಮೊತ್ತ ಮೊದಲ ರಾಷ್ಟ್ರ ಕವಿ.
4. 'ವಾಣಿಯ ಸಮಸ್ಯೆ' ಪಾಠದಲ್ಲಿ 'ರತ್ನ'ನು ಬರೆದ ಪಾತ್ರವನ್ನು 'ಇಂದು' ತೆರೆದು ಓದಲಿಲ್ಲ. ಇದು ಇಂದುವಿನ ಸರಿಯಾದ ತೀರ್ಮಾನ ಸಮರ್ಥಿಸಿ ಬರೆಯಿರಿ. **5 ಅಂಕ**
5. 'ಜೋಗ್ಯೋರ ಅಂಜಪ್ಪನ ಕೋಳೀಕತೆ'ಯಲ್ಲಿ ಗ್ರಾಮೀಣ ಬದುಕಿನ ಚಿತ್ರಣವನ್ನು ಕಾಣುತ್ತೇವೆ. ಕತೆಯಲ್ಲಿ ಬರುವ ಸಂದರ್ಭಗಳ ಆಧಾರದಿಂದ ಸಮರ್ಥಿಸಿರಿ. **4 ಅಂಕ**
6. 'ಆಧುನಿಕ ಶಿಕ್ಷಣ ರಂಗವು ಎದುರಿಸುವ ಸಮಸ್ಯೆಗಳು' ಎಂಬ ವಿಷಯವಾಗಿ ತರಗತಿಯಲ್ಲಿ ನಡೆಯಲಿರುವ ವಿಚಾರಗೋಷ್ಠಿಗೆ ಪ್ರಬಂಧವೊಂದನ್ನು ತಯಾರಿಸಿರಿ. **8 ಅಂಕ**
7. ಕೆಳಗೆ ಕೊಡಲಾದ ವಾಕ್ಯಗಳಿಗೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಅಳವಡಿಸಿ ಶಿಷ್ಟಗನ್ನಡಕ್ಕೆ ಪರಿವರ್ತಿಸಿರಿ. **4 ಅಂಕ**

   ಇಲ್ಲೇನೇ ಅವನಿರೋದು ಯಾರಯ್ಯಾ ಅವನು ಕನಕ ಅನ್ನೋನು. ಬಾಡದಿಂದ ಈ ಕಾಗಿನೆಲೆಗೆ ಬಂದಿರೋನು ಶಾಸ್ತ್ರ ಪುರಾಣ ಮಿಮಾಂಸೆಗಳನ್ನೆಲ್ಲಾ ನುಂಗಿ ನೀರು ಕುಡಿದೀನಿ ಅಂತ ಅಹಂಕಾರದಿಂದ ಬೀಗ್ತಾ ಇರೋನು ಬಾರಯ್ಯ ಈಚೆ.
8. ಕೆಳಗೆ ಕೊಡಲಾದ ಪದ್ಯದ ಸಾಲುಗಳ ಸ್ವಾರಸ್ಯ ಬರೆಯಿರಿ. **6 ಅಂಕ**

   ➢ ಏರಿದೇರಿದನೇರಿ ಗಾಳಿಗುದುರೆ ಸವಾರಿ
   ಚಂದ್ರಕಿರಣವ ಮೀರಿ ಸೂರ್ಯ ಸೇರಿ
   ಬೆಳಕನ್ನೆ ಹಿಂದೊಗೆದು ತಮದ ಬಸಿರನೆ ಬಗೆದು
   ಅಸ್ಪರ್ಶ ಅವಕಾಶದಲ್ಲಿ ಇದ್ದ.

- ಇಂದು ನೆತ್ತರು ಚೆಲ್ಲಿ ಮುಂದೆ ಬಹ ಮಕ್ಕಳಿಗೆ
  ಹೊಟ್ಟೆಗನ್ನವ ಮೈಗೆ ಬಟ್ಟೆಯನು ನೀಡಿ
  ಇಂದು ನೋವಾದರೂ ಇಂದು ಸಾವಾದರೂ
  ಮುಂದೆ ಬಾಳಿಗೆ ಸೊಗಸು ನೆಮ್ಮದಿಯ ಮಾಡಿ.
- ಇವಳಿಗೆ ಮೆಚ್ಚುಗೆಯ ಕೃತಜ್ಞತೆಯ ಕಣ್ಣೀರು
  ಹೆತ್ತದ್ದಕ್ಕೆ ಮಣ್ಣಲ್ಲಿ ಬದುಕಿ
  ಮನೆಯಿಂದ ಹೊಲಕ್ಕೆ ಹೋದಂತೆ
  ತಣ್ಣಗೆ ಮಾತಾನಾಡುತ್ತಲೇ ಹೊರಟು ಹೋದದ್ದಕ್ಕೆ.

9. 'ಮ್ಯಾಗ್ರೋವ್ ಕಾಡು' ಪ್ರವಾಸ ಕಥನವನ್ನು ಓದಿರುವಿರಿ ಈ ಹಿನ್ನಲೆಯಲ್ಲಿ ನೀವು ನೋಡಿದ ಯಾವುದಾದರೊಂದು ಪ್ರೇಕ್ಷಣೀಯ ಸ್ಥಳದ ಕುರಿತು ಪರಿಚಯ ಲೇಖನವನ್ನು ತಯಾರಿಸಿರಿ. **5 ಅಂಕ**
10. 'ಕವಚ'ಕವನವು ಸಾಮಾಜಿಕ ಪಿಡುಗೊಂದರ ಕುರಿತಾಗಿ ರಚಿತವಾದುದು. ಈ ಸಾಮಾಜಿಕ ಪಿಡುಗಿನ ಕುರಿತಾಗಿ ಕವಿಗಳ ಅಭಿಪ್ರಾಯಗಳೇನು? **5 ಅಂಕ**
11. ಗಾದೆಗಳು ಜನಪದ ಸಾಹಿತ್ಯದ ಭಾಗವಾಗಿದೆ. ಕೆಳಗೆ ಎರಡು ಗಾದೆಮಾತುಗಳನ್ನು ಕೊಡಲಾಗಿದೆ. ಇದನ್ನು ವಿಸ್ತರಿಸಿ ಬರೆಯಿರಿ **6 ಅಂಕ**
    - ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಿತೇ?
    - ಮಾತು ಬಲ್ಲವನಿಗೆ ಜಗಳವಿಲ್ಲ ; ಊಟಬಲ್ಲವನಿಗೆ ರೋಗವಿಲ್ಲ.
12. ಯುದ್ಧದಲ್ಲಿ ವೀಕನಾಗಿದ್ದ ಕನಕನು ಯುದ್ಧವನ್ನು ತ್ಯಜಿಸಿ ದಾಸಕೂಟದ ಕಡೆಗೆ ಮನಸ್ಸನ್ನು ಬದಲಾಯಿಸಿದನು. ಕನಕನ ಮನಸ್ಸಲ್ಲಿ ಯುದ್ಧ ವಿರೋಧಿ ಭಾವನೆಗಳು ಬರಲು ಕಾರಣಗಳೇನು? **6 ಅಂಕ**
13. ನಮ್ಮ ಪರಿಸರದ ನದಿಗಳು ದಿನೇ ದಿನೇ ಮಾಲಿನ್ಯಕ್ಕೆ ಒಳಗಾಗುತ್ತಿವೆ. ಇದನ್ನು ತಡೆಗಟ್ಟಲು, ಜನ ಜಾಗೃತಿ ಉಂಟಾಗಲು ಕರಪತ್ರವೊಂದನ್ನು (Notice) ತಯಾರಿಸಿರಿ. **5 ಅಂಕ**
14. ನಿಮ್ಮ ಶಾಲಾ ಪರಿಸರದಲ್ಲಿ ನೂತನವಾಗಿ ಆರಂಭವಾಗಲಿರುವ ಹೋಟೆಲ್ ಒಂದನ್ನು ಜನರಿಗೆ ಪರಿಚಯಿಸುವ ಸಲುವಾಗಿ ಜಾಹೀರಾತೊಂದನ್ನು ತಯಾರಿಸಿರಿ. **4 ಅಂಕ**
15. 'ಭೇದದಲಿ ಹೊಕ್ಕಿರಿದನೋ' ಕಾವ್ಯ ಭಾಗದಲ್ಲಿ ಕೃಷ್ಣನು ಕರ್ಣನ ಮನಸ್ಸನ್ನು ಉಭಯ ಸಂಕಟಕ್ಕೆ ಒಳಪಡಿಸಿದ ಬಗೆಯನ್ನು ಸಂಗ್ರಹವಾಗಿ ತಿಳಿಸಿರಿ. **6 ಅಂಕ**

    ಅಥವಾ

    ಮುಗ್ಧ ಭಕ್ತಿಗೆ ದೇವರು ಒಲಿಯುತ್ತಾನೆ ಎಂಬುದನ್ನು 'ಕೋಳೂರ ಕೊಡಗೂಸು' ಕಾವ್ಯಭಾಗದ ಹಿನ್ನಲೆಯಲ್ಲಿ ಸ್ಪಷ್ಟಪಡಿಸಿರಿ.
16. ಕೆಳಗೆ ಮೂರು ತಖ್ತೆಗಳನ್ನು ಕೊಡಲಾಗಿದೆ. ಒಂದನೇ ತಖ್ತೆಯಲ್ಲಿ ಕವಿಗಳ ಹೆಸರನ್ನೂ, ಎರಡನೆಯದರಲ್ಲಿ ಸಾಹಿತ್ಯ ಪ್ರಕಾರಗಳನ್ನೂ, ಮೂರನೆಯ ತಖ್ತೆಯಲ್ಲಿ ಕವಿಗಳ ಕೃತಿಗಳ ಸಾಲುಗಳನ್ನೂ ಕೊಡಲಾಗಿದೆ. ಇವನ್ನು ಹೊಂದಿಸಿ ಬರೆಯಿರಿ. **5 ಅಂಕ**

| | |
|---|---|
| ತಖ್ತೆ - 1 | 1. ಬಸವಣ್ಣ, ಕುಮಾರವ್ಯಾಸ, ಬೇಂದ್ರೆ, ಶಿವರಾಮ ಕಾರಂತ, ಪುರಂದರ ದಾಸ |
| ತಖ್ತೆ - 2 | 2. ಹೊಸಗನ್ನಡ ಕವಿತೆ, ವಚನ, ವೈಚಾರಿಕ ಲೇಖನ, ಕೀರ್ತನೆ, ಷಟ್ಪದಿ |
| ತಖ್ತೆ - 3 | 3. ವೀರರೈವರ ನೋಯಿಸೆನು<br>ನಿಧಾನವ ಕಾಯ್ದಿರ್ದ ಬೆಂತರನಂತೆ<br>ಬುದ್ದನ ಜಯಂತಿಗಿದೆ ಜಯವೆಂದಿಗೂ<br>ಪತಿಗಳ ನಿಂದಿಪ ಸತಿಯರು ಬಹುವಿಧ ವ್ರತಗಳ<br>ಬದುಕು ಸಿಹಿ-ಕಹಿಗಳ ಪಾಕ |